**All India Radio: Bangalore**
**National Bulletin In Kannada**
**22.03.2025  13.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**22.03.2025  13.10 p.m.**

ಮುಖ್ಯಾಂಶಗಳು

- ಇಂದು ವಿಶ್ವ ಜಲ ದಿನ; ನೀರಿನ ಸಂರಕ್ಷಣೆ, ಜಲಸಂಪನ್ಮೂಲ ನಿರ್ವಹಣೆ ಮಹತ್ವದ ಬಗ್ಗೆ ಜಾಗೃತಿ
- ನ್ಯಾಯಯುತ ಕ್ಷೇತ್ರ ಮರು ವಿಂಗಡಣೆ ಕುರಿತ ಮೊದಲ ಜಂಟಿ ಕ್ರಿಯಾ ಸಮಿತಿ ಸಭೆ ಇಂದು ಚೆನ್ನೈನಲ್ಲಿ ಆರಂಭ
- ಪಾಕಿಸ್ತಾನ, ಭಯೋತ್ಪಾದನೆಗೆ ಬೆಂಬಲ ನೀಡುತ್ತಿರುವುದರಿಂದ ಗಡಿ ಪ್ರದೇಶದಲ್ಲಿ ಅಭಿವೃದ್ಧಿ ಕುಂಠಿತ - ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್
- ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ; ಸೆಮಿಫೈನಲ್‌ನಲ್ಲಿಂದು ಭಾರತದ ತ್ರಿಶಾ, ಗಾಯತ್ರಿ ಜೋಡಿ ಸೆಣಸು
- ಐಪಿಎಲ್ ಟಿ೨೦ ಕ್ರಿಕೆಟ್ ಪಂದ್ಯಾವಳಿ; ಉದ್ಘಾಟನಾ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ - ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಣಾಹಣಿ

<><><><>

ಇಂದು ವಿಶ್ವ ಜಲ ದಿನ. ಈ ದಿನ ನೀರಿನ ಸಂರಕ್ಷಣೆ ಮತ್ತು ಜಲಸಂಪನ್ಮೂಲ ನಿರ್ವಹಣೆ ಮಹತ್ವವನ್ನು ತಿಳಿಸುವ ದಿನವಾಗಿದೆ. ಈ ಕುರಿತು ಒಂದು ವರದಿ ಜಾಗತಿಕ ನೀರಿನ ಬಿಕ್ಕಟ್ಟನ್ನು ನಿಭಾಯಿಸುವ ಕುರಿತಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸುವ ಜತೆಗೆ ಅದರೆಡೆಗೆ ಕಾರ್ಯ ಪ್ರವೃತ್ತರಾಗಲು ಪ್ರೇರೇಪಿಸುವುದು ವಿಶ್ವ ಜಲ ದಿನಾಚರಣೆಯ ಗುರಿಯಾಗಿದೆ.ಈ ಆಚರಣೆ ೨೦೩೦ರ ವೇಳೆಗೆ ಎಲ್ಲರಿಗೂ ನೀರು ಮತ್ತು ನೈರ್ಮಲ್ಯ ಖಚಿತಪಡಿಸುವ ಗುರಿಯನ್ನು  ಹೊಂದಿರುವ ಸುಸ್ಥಿರ ಅಭಿವೃದ್ಧಿಯ ಗುರಿ ಎಸ್‌ಡಿಜಿ-೬ಕ್ಕೆ

ಹೊಂದಾಣಿಕೆಯಾಗುತ್ತದೆ. ಹಿಮ ನದಿಗಳ ಸಂರಕ್ಷಣೆ ಎಂಬುದು ಈ ವರ್ಷದ ಧ್ಯೇಯವಾಕ್ಯವಾಗಿದ್ದು, ಜಲ ಸಂರಕ್ಷಣೆಯ ಬಗ್ಗೆ ಜನಜಾಗೃತಿ ಮೂಡಿಸಲು ದೇಶಾದ್ಯಂತ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ೧೯೯೨ ರಲ್ಲಿ ಬ್ರೆಜಿಲ್‌ನ ರಿಯೊ ಡಿ ಜನ್ನೈರೊದಲ್ಲಿ ನಡೆದ ವಿಶ್ವ ಸಂಸ್ಥೆಯ ಪರಿಸರ ಮತ್ತು ಅಭಿವೃದ್ಧಿಯ ಸಮ್ಮೇಳನದಲ್ಲಿ ಮಾರ್ಚ್ ೨೨ಅನ್ನು ವಿಶ್ವ ಜಲ ದಿನವೆಂದು ಅಧಿಕೃತವಾಗಿ ಗೊತ್ತುಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಈ ದಿನದ ಮೊದಲ ಆಚರಣೆಯು ೧೯೯೩ರ ಮಾರ್ಚ್ ೨೨ ರಂದು ನಡೆಯಿತು.

**ಈ ಕುರಿತು ಒಂದು ವರದಿ ಚೇತನ್ (೫೦ ಸೆಕೆಂಡ್‌ಗಳು)**

ವಿಶ್ವ ಜಲ ದಿನದ ಅಂಗವಾಗಿ ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ನೀರು, ನಾಗರಿಕತೆಗಳ ಜೀವನಾಡಿಯಾಗಿದ್ದು, ನೀರು ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಉತ್ತೇಜನ ನೀಡುವ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ.

**ಧ್ವನಿ : ನರೇಂದ್ರ ಮೋದಿ**

<><><>

ನ್ಯಾಯಯುತ ಕ್ಷೇತ್ರ ಮರು ವಿಂಗಡಣೆಗೆ ಆಗ್ರಹಿಸಿ ಮೊದಲ ಜಂಟಿ ಕ್ರಿಯಾ ಸಮಿತಿ ಸಭೆ ಇಂದು ಚೆನ್ನೈನಲ್ಲಿ ನಡೆಯುತ್ತಿದೆ. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸಭೆಯ ಅಧ್ಯಕ್ಷತೆ ವಹಿಸಿದ್ದಾರೆ. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಸಿಂಗ್ ಮಾನ್ ಮತ್ತು ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ಒಕ್ಕೂಟ ವ್ಯವಸ್ಥೆ ಮತ್ತು ಕ್ಷೇತ್ರ ವಿಂಗಡನೆ ಸವಾಲುಗಳ ಕುರಿತು ಮೊದಲ ಸುತ್ತಿನ ಚರ್ಚೆಯಲ್ಲಿ ಸಮಾಲೋಚನೆ ನಡೆಯಲಿದೆ. ತಮ್ಮ ಉದ್ಘಾಟನಾ ಭಾಷಣದಲ್ಲಿ ಎಂ.ಕೆ. ಸ್ಟಾಲಿನ್, ಕೇಂದ್ರ ಸೂಚಿಸಿರುವ ಕ್ಷೇತ್ರ ವಿಂಗಡನೆ ಕಾರ್ಯಸೂಚಿ, ಪ್ರಜಾಪ್ರಭುತ್ವ ಒಕ್ಕೂಟ ವ್ಯವಸ್ಥೆ ಮತ್ತು ರಾಜ್ಯಗಳ ಸಮಾನ ಪ್ರಾತಿನಿಧ್ಯವನ್ನು ದುರ್ಬಲಗೊಳಿಸುತ್ತದೆ ಎಂದು ಹೇಳಿದ್ದಾರೆ. ಈ ಕುರಿತಂತೆ ನಿರ್ಣಯ ಕೈಗೊಳ್ಳಲು ಇಂದು ತಜ್ಞರ ಮಂಡಳಿಯನ್ನು ಸ್ಥಾಪಿಸಲು ಅವರು ಕರೆ ನೀಡಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ಲೋಕಸಭಾ ಕ್ಷೇತ್ರಗಳನ್ನು ಯಾವುದೇ ಕಾರಣಕ್ಕೂ ಕಡಿಮೆಯಾಗಲು ಬಿಡುವುದಿಲ್ಲ ಎಂದು ತಿಳಿಸಿದ್ದಾರೆ.

<><><>

ಗಡಿಯಾಚೆಗಿನ ಭಯೋತ್ಪಾದನೆಯನ್ನು ಪಾಕಿಸ್ತಾನ ಸಕ್ರಿಯವಾಗಿ ಬೆಂಬಲಿಸುತ್ತಿರುವುದರಿಂದ ಆ ಪ್ರದೇಶದಲ್ಲಿ ಶಾಂತಿ ಮತ್ತು ಭದ್ರತೆಗೆ ದೊಡ್ಡ ಅಡ್ಡಿಯಾಗಿ ಪರಿಣಮಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಿನ್ನೆ ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ತಲೆಮರೆಸಿಕೊಂಡಿರುವ ಇಸ್ಲಾಮ್ ಪ್ರಚಾರಕ ಜಾಕಿರ್ ನಾಯಕ್, ಪಾಕಿಸ್ತಾನದಲ್ಲಿರುವುದು ಹಾಗೂ ಪಾಕಿಸ್ತಾನದ ಉನ್ನತ ಮಟ್ಟದ ನಾಯಕರೊಂದಿಗೆ ಸಭೆ ನಡೆಸಿರುವುದು ಆ ದೇಶ ಅನುಸರಿಸುತ್ತಿರುವ ವಿಧಾನವನ್ನು ಎತ್ತಿ ತೋರುತ್ತದೆ. ಭಾರತದಲ್ಲಿ ಬೇಕಾಗಿರುವ ವ್ಯಕ್ತಿಗೆ ಈ ರೀತಿ ಬೆಂಬಲ ನೀಡುವಲ್ಲಿ ಅರ್ಥವಿಲ್ಲ ಎಂದು ಅವರು ಹೇಳಿದ್ದಾರೆ.

<><><>

ಬಿಹಾರ ಇಂದು ತನ್ನ ೧೧೩ನೇ ಸಂಸ್ಥಾಪನಾ ದಿನವನ್ನು ಆಚರಿಸುತ್ತಿದೆ. ೧೯೧೨ರ ಮಾರ್ಚ್ ೨೨ರಂದು ಬ್ರಿಟೀಷ್ ಆಳ್ವಿಕೆಯಲ್ಲಿದ್ದ ವೇಳೆ ಬಂಗಾಳ ಪ್ರಾಂತ್ಯದಿಂದ ಬೇರ್ಪಡಿಸಿ, ಬಿಹಾರ ರಾಜ್ಯವನ್ನು ರಚಿಸಲಾಯಿತು. ಈ ದಿನವನ್ನು ಬಿಹಾರ ದಿವಸ ಎಂದು ಆಚರಿಸಲಾಗುತ್ತಿದೆ. 'ಉನ್ನತ್ ಬಿಹಾರ್ - ವಿಕಸಿತ್ ಬಿಹಾರ್' ಎನ್ನುವುದು ಈ ವರ್ಷದ ಧ್ಯೇಯ ವಾಕ್ಯವಾಗಿದೆ. ಸಂಸ್ಥಾಪನಾ ದಿನಾಚರಣೆ ಹಿನ್ನೆಲೆ ರಾಜ್ಯಾದ್ಯಂತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಬಿಹಾರ ಸಂಸ್ಥಾಪನಾ ದಿನದ ಶುಭಾಶಯ ಕೋರಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ರಾಷ್ಟ್ರಪತಿ, ಬಿಹಾರ ಪ್ರಾಚೀನ ಕಾಲದಿಂದಲೂ ಜ್ಞಾನ ಮತ್ತು ಅಭಿವೃದ್ಧಿಯ ತಾಣವಾಗಿದೆ ಎಂದಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡಿರುವ ಪ್ರಧಾನಿ, ಬಿಹಾರ, ಶ್ರೇಷ್ಠ ನಾಯಕರ ಪವಿತ್ರ ಸ್ಥಾನವಾಗಿದ್ದು, ಅಭಿವೃದ್ಧಿಯ ಪಯಣದಲ್ಲಿ ಒಂದು ಮಹತ್ವದ ಘಟ್ಟದಲ್ಲಿದೆ. ಶ್ರಮಪಟ್ಟು ಕೆಲಸ ಮಾಡುವ ಬಿಹಾರದ ಪ್ರತಿಭಾನ್ವಿತ ಜನರು ರಾಜ್ಯ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರವಹಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

<><><>

ನೋಯ್ಡಾ ಕ್ರೀಡಾ ನಗರ ಯೋಜನೆಯ ಅನುದಾನ ಹಂಚಿಕೆ ಅಭಿವೃದ್ಧಿ ಮತ್ತು ಮಂಜೂರಾತಿ ಪ್ರಕ್ರಿಯೆಯಲ್ಲಿನ ಅಕ್ರಮಗಳ ಆರೋಪಗಳಿಗೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ದಳ - ಸಿಬಿಐ, ದೆಹಲಿ ಮತ್ತು ನೋಯ್ಡಾದ ಹಲವು ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿತು. ಮೂಲಗಳ ಪ್ರಕಾರ ಅಲಹಾಬಾದ್ ಹೈಕೋರ್ಟ್‌ನ ನಿರ್ದೇಶನದ ಮೇರೆಗೆ ಸಿಬಿಐ, ವಿವಿಧ ಕಂಪನಿಗಳು,

ಅವುಗಳ ನಿರ್ದೇಶಕರು ಮತ್ತು ಅಪರಿಚಿತ ಸರ್ಕಾರಿ ನೌಕರರ ವಿರುದ್ಧ ಮೂರು ಪ್ರಕರಣಗಳನ್ನು ದಾಖಲಿಸಿದೆ. ಶೋಧ ಕಾರ್ಯದ ವೇಳೆ ಸಂಸ್ಥೆಯ ಹಲವು ದಾಖಲೆಗಳು, ಡಿಜಿಟಲ್ ಪುರಾವೆಗಳು ಮತ್ತಿತರ ವಸ್ತುಗಳನ್ನು ವಶಪಡಿಸಿಕೊಂಡಿದೆ. ನೋಯ್ಡಾ ಕ್ರೀಡಾನಗರ ಯೋಜನೆ, ನೋಯ್ಡಾದ ಸೆಕ್ಟರ್ ೭೮, ೭೯ ಮತ್ತು ೧೫೦ರಲ್ಲಿ ವಸತಿ ಮತ್ತು ವಾಣಿಜ್ಯ ಪ್ರದೇಶಗಳೊಂದಿಗೆ ವಿಶ್ವದರ್ಜೆಯ ಕ್ರೀಡಾ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಿತ್ತು. ಆದರೆ ಈ ಯೋಜನೆಗಳ ಹಂಚಿಕೆಯ ನಂತರ ಸಂಬಂಧಿತ ಪಾಲುದಾರರು ಷರತ್ತುಗಳಲ್ಲಿ ಹಲವು ಭಾರಿ ಉಲ್ಲಂಘಿಸಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು.. ಇದರಿಂದ ರಾಜ್ಯ ಬೊಕ್ಕಸಕ್ಕೆ ಸುಮಾರು ೯ ಸಾವಿರ ಕೋಟಿ ರೂಪಾಯಿಗಳ ಆರ್ಥಿಕ ನಷ್ಟ ಉಂಟಾಗಿದೆ ಎಂದು ವಿಶ್ಲೇಷಿಸಲಾಗಿತ್ತು.

<><><>

ಕ್ಯೂಬಾ, ಹೈಟಿ, ನಿಕಾರಗುವಾ ಮತ್ತು ವೆನೆಜುಲ್ಲಾದ ಲಕ್ಷಾಂತರ ಜನರಿಗೆ ಈವರೆಗೆ ನೀಡಿದ್ದ ಕಾನೂನು ಭದ್ರತೆಯನ್ನು ರದ್ದುಪಡಿಸುವುದಾಗಿ ಅಮೆರಿಕದ ಗೃಹ ಭದ್ರತಾ ಇಲಾಖೆ ತಿಳಿಸಿದೆ. ಈ ನಿರ್ಧಾರ ಆ ದೇಶಗಳ ಜನರನ್ನು ಸುಮಾರು ಒಂದು ತಿಂಗಳ ಅವಧಿಯಲ್ಲಿ ಗಡಿಪಾರು ಮಾಡಲು ಅಮೆರಿಕಕ್ಕೆ ಅನುವು ಮಾಡಿಕೊಡಲಿದೆ.  ೨೦೨೨ರ ಅಕ್ಟೋಬರ್‌ನಿಂದೀಚೆಗೆ ಅಮೆರಿಕ್ಕೆ ಈ ನಾಲ್ಕು ದೇಶಗಳಿಂದ ವಲಸೆ ಬಂದಿರುವ ಸುಮಾರು ೫ ಲಕ್ಷ ೩೨ ಸಾವಿರ ಜನರಿಗೆ ಈ ಆದೇಶ ಅನ್ವಯಿಸುತ್ತದೆ. ಈ ಜನರಿಗೆ ಎರಡು ವರ್ಷಗಳ ಕಾಲ ಅಮೆರಿಕದಲ್ಲಿ ವಾಸಿಸಿ, ಕೆಲಸ ಮಾಡಲು ಆರ್ಥಿಕ ಸಹಾಯದೊಂದಿಗೆ ಪರವಾನಗಿಯನ್ನು ನೀಡಲಾಗಿತ್ತು.

<><><>

ಸ್ವಿಜ್ಜರ್‌ಲ್ಯಾಂಡ್‌ನ ಬ್ಯಾಸಲ್‌ನಲ್ಲಿ ನಡೆಯುತ್ತಿರುವ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಭಾರತದ ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಸೆಮಿಫೈನಲ್ಸ್ ಪ್ರವೇಶಿಸಿದ್ದಾರೆ. ಇಂದು ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ಅವರು, ಚೀನಾದ ಲಿಯೂಶೆಂಗ್‌ಶೂ ಮತ್ತು ಟ್ಯಾನ್‌ನಿಂಗ್ ಜೋಡಿಯನ್ನು ಎದುರಿಸಲಿದ್ದಾರೆ. ನಿನ್ನೆ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಭಾರತೀಯ ಜೋಡಿ ಚೀನಾದ ಲನೇ ಶ್ರೇಯಾಂಕಿತ ಯುಂಗ್ ಎಂಗಾ ಟಿಂಗ್ ಮತ್ತು ಯುಂಗ್ ಪುಯಿ ಲಾಮ್ ಜೋಡಿಯನ್ನು ೨೧-೧೮, ೨೧-೧೪ ಸೆಟ್‌ಗಳ ಅಂತರದಲ್ಲಿ ಮಣಿಸಿ, ಮುಂದಿನ ಹಂತ ಪ್ರವೇಶಿಸಿದೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭಾರತದ

ಶಂಕರ್ ಸುಬ್ರಮಣಿಯನ್, ಫ್ರಾನ್ಸನ ಕ್ರಿಸ್ಟೋಫೊಫೊವ್ ವಿರುದ್ಧ ೧೦-೨೧, ೧೪-೨೧ ಸೆಟ್‌ಗಳ ಅಂತರದಲ್ಲಿ ಸೋಲನುಭವಿಸಿ, ಟೂರ್ನಿಯಿಂದ ಹೊರಬಿದ್ದಿದ್ದಾರೆ.

<><><><>

೧೮ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ - ಐಪಿಎಲ್ ೨೦೨೫ ಟಿ೨೦ ಕ್ರಿಕೆಟ್ ಪಂದ್ಯಾವಳಿಗೆ ಇಂದು ಚಾಲನೆ ದೊರೆಯಲಿದೆ. ಕೋಲ್ಕತ್ತಾದ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ೭.೩೦ಕ್ಕೆ ಆರಂಭವಾಗಲಿದೆ. ಉದ್ಘಾಟನಾ ಪಂದ್ಯಕ್ಕೂ ಮೊದಲು ನಡೆಯಲಿರುವ ಅದ್ದೂರಿ ಉದ್ಘಾಟನಾ ಸಮಾರಂಭದಲ್ಲಿ ಹಲವು ಹಿಂದಿ ಚಲನಚಿತ್ರರಂಗದ ನಟ, ನಟಿಯರು, ಖ್ಯಾತ ಸಂಗೀತಗಾರರ ಪಾಲ್ಗೊಂಡು ಜನರ ಮನರಂಜಿಸಲಿದ್ದಾರೆ. ಪಂದ್ಯಾವಳಿಯಲ್ಲಿ ಒಟ್ಟು ೧೦ ತಂಡಗಳು, ಒಟ್ಟು ೭೪ ಪಂದ್ಯಗಳಲ್ಲಿ ಸ್ಪರ್ಧಿಸಲಿದ್ದು, ಫೈನಲ್ ಪಂದ್ಯ ಮೇ ೨೫ರಂದು ನಡೆಯಲಿದೆ. ಹತ್ತು ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಎ ಗುಂಪಿನಲ್ಲಿ ಚೆನ್ನೈ ಸೂಪರ್ ಕಿಂಗ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ರಾಜಸ್ತಾನ್ ರಾಯಲ್ಸ್, ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ಸ್ಥಾನ ಪಡೆದಿದ್ದರೆ, ಬಿ ಗುಂಪಿನಲ್ಲಿ ಮುಂಬೈ ಇಂಡಿಯನ್ಸ್, ಗುಜರಾತ್ ಟೈಟನ್ಸ್, ಡೆಲ್ಲಿ ಕ್ಯಾಪಿಟಲ್ಸ್, ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಲಖನೌ ಸೂಪರ್ ಜೈಂಟ್ಸ್ ತಂಡಗಳು ಇರಲಿವೆ. ಈ ನಡುವೆ ಬಿಸಿಸಿಐ ಐಪಿಎಲ್ ಟೂರ್ನಿಗೆ ಸಂಬಂಧಿಸಿದಂತೆ ಹಲವು ಪ್ರಮುಖ ಬದಲಾವಣೆಗಳನ್ನು ತಂದಿದ್ದು, ಅದರಲ್ಲಿ ಇತ್ತೀಚಿನ ಎಂಜಲು ನಿಷೇಧವನ್ನು ತೆಗೆದು ಹಾಕಿರುವುದು ಪ್ರಮುಖ ನಿರ್ಧಾರಗಳಲ್ಲಿ ಒಂದಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>